ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 39,706 ಕಿಮೀ. ಉದ್ದ ರಸ್ತೆಗಳಿವೆ. ಇವುಗಳಲ್ಲಿ ರಾಜ್ಯ ಹೆದ್ದಾರಿಯ ಉದ್ದ - 11,395 ಕಿಮೀ, ಜಿಲ್ಲಾ ಮುಖ್ಯ ರಸ್ತೆಯ ಉದ್ದ 28,311 ಕಿಮೀ.

ಆ) ಒಟ್ಟಾರೆ 1997 ಕಿಮೀ. ಉದ್ದದ ಏಳು ರಾಷ್ಟ್ರೀಯ ಹೆದ್ದಾರಿಗಳು ಇವೆ.

ಇ) ರಾಜ್ಯದಲ್ಲಿ 1972 ರಿಂದಲೂ ಯಾವುದೇ ರಾಷ್ಟ್ರೀಯ ಹೆದ್ದಾರಿಯನ್ನು ಹೊಸದಾಗಿ ಕೇಂದ್ರ ಸರ್ಕಾರ ಘೋಷಿಸಿರುವುದಿಲ್ಲ.

ಈ) 1996-97ರ ಸಾಲಿನಲ್ಲಿ ಕೆಲವು ಭಾಗಗಳನ್ನು ಅಭಿವೃದ್ಧಿಪಡಿಸಲು 70.80 ಲಕ್ಷ ರೂ.ಗಳ ಮೊತ್ತ ಅಂದಾಜಿಸಿದ್ದು, ಕೆಲಸಗಳು ಪ್ರಗತಿಯಲ್ಲಿವೆ. 1997-98ರ ಸಾಲಿನಲ್ಲಿಯೂ ಸಹ 95.00 ಲಕ್ಷ ರೂ.ಗಳಷ್ಟು ಅಂದಾಜು ಮೊತ್ತದ ಕಾಮಗಾರಿಗಳನ್ನು ಪ್ರಸ್ತಾವಿಸಿದೆ. ಇದಲ್ಲದೇ ಕೇಂದ್ರದಿಂದ ಆರ್ಥಿಕ ಪ್ರಾಮುಖ್ಯತೆ ಸಾಲ ನೆರವಿನಡಿಯಲ್ಲಿ ಸುಮಾರು 44 ಕಿಮೀ.ರಸ್ತೆ ಅಭಿವೃದ್ಧಿಗೆ ಒಪ್ಪಿಗೆ ದೊರೆತಿದ್ದು, ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಇಲ್ಲಿಯ ತನಕ ನಬಾರ್ಡ್ ಯೋಜನೆಯಿಂದ ಬಿಡುಗಡೆಯಾದ ಹಣ

2048 - ಶ್ರೀ ಕೆ. ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇಲ್ಲಿಯ ತನಕ ನಬಾರ್ಡ್ ಯೋಜನೆಯಿಂದ ಒಟ್ಟು ಬಿಡುಗಡೆಯಾದ ಹಣವೆಷ್ಟು?

ಆ) ಈ ಯೋಜನೆ ಅಡಿಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಕಾಮಗಾರಿ ಮಂಜೂರಾಗಿದೆ. (ತಾಲ್ಲೂಕುವಾರು ವಿವರ ನೀಡುವುದು)

ಇ) ನಬಾರ್ಡ್ ಯೋಜನೆಯಲ್ಲಿ ಕಾಮಗಾರಿ ಮಂಜೂರಾತಿ ನೀಡಲು ಸರ್ಕಾರ ಮಾರ್ಗಸೂಚಿ ಏನಾದರೂ ಸೂಚಿಸಿದೆಯೇ?

ಈ) ಈ ಕಾಮಗಾರಿ ಪಟ್ಟಿಯನ್ನು ಯಾರು ಸೂಚಿಸಬೇಕು?

ಉ) ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಸಿರ್ಸಿ, ಯಲ್ಲಾಪುರ ತಾಲ್ಲೂಕುಗಳು, ಹಿಂದುಳಿದ ಗುಡ್ಡಗಾಡು ಪ್ರದೇಶಗಳೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಬಂದಿದ್ದಲ್ಲಿ ಇದನ್ನು ಅಭಿವೃದ್ಧಿಪಡಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈವರೆಗೆ ನಬಾರ್ಡ್‌ನಿಂದ ಹಣ ಬಿಡುಗಡೆಯಾಗಿರುವುದಿಲ್ಲ.

ಆ) ವಿವರ ಸಲ್ಲಿಸಿದೆ (ಅನುಬಂಧ -1)

ಇ) ಹೌದು.

ಈ) ಕಾಮಗಾರಿಗಳ ಪಟ್ಟಿಯನ್ನು ಗ್ರಾಮೀಣ ಅಭಿವೃದ್ಧಿಯ ಹಿನ್ನೆಲೆಯನ್ನು ಆಧಾರಿಸಿ ಮುಖ್ಯ ಇಂಜಿನಿಯರವರು ಸೂಚಿಸಬೇಕು.

ಉ) ಹೌದು.

ಊ) ಹೌದು. ಈ ತಾಲ್ಲೂಕುಗಳಲ್ಲಿ ಈವರೆಗೆ 4 ಕಾಮಗಾರಿಗಳು 232.38 ಲಕ್ಷ ರೂ.ಗಳ ಮೊತ್ತಕ್ಕೆ ಒಪ್ಪಿತವಾಗಿದೆ.

ಅನುಬಂಧ -1

ನಬಾರ್ಡ್ ಯೋಜನೆಯಡಿಯಲ್ಲಿ ಮಂಜೂರಾಗಿರುವ ಕಾಮಗಾರಿಗಳು (ತಾಲ್ಲೂಕುವಾರು ವಿವರ)

ತಾಲ್ಲೂಕು	ರಸ್ತೆಗಳು	ಸೇತುವೆಗಳು	ತಾಲ್ಲೂಕು	ರಸ್ತೆಗಳು	ಸೇತುವೆಗಳು
ಬೆಂಗಳೂರು ಗ್ರಾಮಾಂತರ ಜಿಲ್ಲೆ			**ಶಿವಮೊಗ್ಗ ಜಿಲ್ಲೆ**		
ರಾಮನಗರ	1	6	ಶಿವಮೊಗ್ಗ	-	2
ಬೆಂಗಳೂರು (ದಕ್ಷಿಣ)	-	2	ಹೊನ್ನಾಳಿ	2	2
ಕನಕಪುರ	2	3	ಚೆನ್ನಗಿರಿ	3	-
ದೊಡ್ಡಬಳ್ಳಾಪುರ	-	1	ಸಾಗರ	1	-
ನೆಲಮಂಗಲ	1	1	ತೀರ್ಥಹಳ್ಳಿ	2	-
ಚನ್ನಪಟ್ಟಣ	1	1	ಶಿಕಾರಿಪುರ	1	-
ಮಾಗಡಿ	1	-	ಸೊರಬ	1	-
ಕೋಲಾರ ಜಿಲ್ಲೆ			**ಚಿತ್ರದುರ್ಗ ಜಿಲ್ಲೆ**		
ಕೋಲಾರ	4	1	ಹೊಸದುರ್ಗ	2	2
ಬಾಗೆಪಲ್ಲಿ	1	1	ಚಳ್ಳಕೆರೆ	1	2
ಶ್ರೀನಿವಾಸಪುರ	1	-	ಹರಿಹರ	-	2
ಮುಳಬಾಗಿಲು	2	-	ದಾವಣಗೆರೆ	1	-
ಚಿಂತಾಮಣಿ	2	-	ಹೊಳಲಕೆರೆ	1	-

1	2	3	1	2	3
ಮಾಲೂರು	1	-	**ಹಾಸನ ಜಿಲ್ಲೆ**		
ಗುಡಿಬಂಡೆ	2	-	ಸಕಲೇಶಪುರ	1	3
ಶಿಡ್ಲಘಟ್ಟ	1	-	ಅರಕಲಗೂಡು	1	1
ಗೌರಿಬಿದನೂರು	1	-	ಹಾಸನ	1	-
			ಬೇಲೂರು	1	-
ತುಮಕೂರು ಜಿಲ್ಲೆ			ಚೆನ್ನರಾಯಪಟ್ಟ	2	-
ಗುಬ್ಬಿ	1	2	ಅರಸಿಕೆರೆ	2	-
ತುಮಕೂರು	2	-	ಹೊಳೆನರಸೀಪುರ	5	-
ತುರುವೇಕೆರೆ	2	1	**ಚಿಕ್ಕಮಗಳೂರು ಜಿಲ್ಲೆ**		
ಪಾವಗಡ	2	-	ಚಿಕ್ಕಮಗಳೂರು	-	2
ತಿಪಟೂರು	1	-	ಕಡೂರು	1	2
ಕುಣಿಗಲ್	4	-	ನರಸಿಂಹರಾಜಪುರ	-	1
ಶಿರಾ	1	-	ಶೃಂಗೇರಿ	2	2
ಕೊರಟಗೆರೆ	2	-	ಮೂಡಿಗೆರೆ	1	-
ಮೈಸೂರು ಜಿಲ್ಲೆ			**ದಕ್ಷಿಣ ಕನ್ನಡ ಜಿಲ್ಲೆ**		
ನಂಜನಗೂಡು	1	2	ಮಂಗಳೂರು 1(ಭಾಗಶಃ)		2
ಕೊಳ್ಳೇಗಾಲ	1	1	ಬಂಡವಾಳ 1(ಭಾಗಶಃ)		1
ಪಿರಿಯಾಪಟ್ಟಣ	-	1	ಉಡುಪಿ	-	2
ಹಾಮರಾಜನಗರ	2	1	ಪುತ್ತೂರು	-	1
ಟಿ.ನರಸೀಪುರ	1	4	ಸುಳ್ಯ	-	2
ಮೈಸೂರು	1	-	ಕಾರ್ಕಳ	-	1
ಹುಣಸೂರು	1	-	ಬೆಳ್ತಂಗಡಿ	-	1
ಕೆಚ್.ಡಿ. ಕೋಟೆ	1	-			
ಮಂಡ್ಯ ಜಿಲ್ಲೆ			**ಕೊಡಗು ಜಿಲ್ಲೆ**		
ಮಂಡ್ಯ	2	-	ಮಡಿಕೇರಿ	1	12
.ಆರ್.ಪೇಟೆ	1	-	ಸೋಮವಾರಪೇಟೆ	2	8

1	2	3
ನಾಗಮಂಗಲ	2	-
ವೀರಾಜಪೇಟೆ	2	3
ಪಾಂಡವಪುರ	3	1
ಮಳವಳ್ಳಿ	1	1
ಮದ್ದೂರು	3	1
ಬೆಳಗಾಂ ಜಿಲ್ಲೆ		
ಚಿಕ್ಕೋಡಿ	-	5
ಅಥಣಿ	-	2
ಗೋಕಾಕ್	-	2
ಸವದತ್ತಿ	-	1
ರಾಮದುರ್ಗ	-	1
ಬಿಜಾಪುರ ಜಿಲ್ಲೆ		
ಜಮಖಂಡಿ	-	1
ಹುನಗುಂದ	-	1
ಬಿಜಾಪುರ	-	1
ಮುದ್ದೋಳ್	-	1
ಇಂಡಿ	-	1
ಮುದ್ದೇಬಿಹಾಳ್	4	-
ಸಿಂದಗಿ	4	1
ಬಸವನ ಬಾಗೇವಾಡಿ	-	1
ಬಾದಾಮಿ	-	1
ಧಾರವಾಡ ಜಿಲ್ಲೆ		
ಮುಂಡರಗಿ	-	1
ಹಾನಗಲ್	1	3
ಶಿಗ್ಗಾಂವ್	-	1
ರೋಣ	1	2
ಸವಣೂರು	1	-
ಹಾವೇರಿ	1	-
ಹುಬ್ಬಳ್ಳಿ (ಗ್ರಾಮಾಂತರ)	1	-
ಶಿರಹಟ್ಟಿ	1	-
ಗದಗ್	2	-
ನವಲಗುಂದ	1	-
ಬೀದರ್ ಜಿಲ್ಲೆ		
ಬೀದರ್	1(ಭಾಗಶಃ)	-
ಬಾಲ್ಕಿ	1(ಭಾಗಶಃ)	-
ಉತ್ತರ ಕನ್ನಡ ಜಿಲ್ಲೆ		
ಕಾರವಾರ	-	3
ಹಳಿಯಾಳ	2	1
ಸಿರ್ಸಿ	2	1
ಸಿದ್ದಾಪುರ	1	1
ಕುಮಟಾ	1	-
ಅಂಕೋಲಾ	1	-
ಮುಂಡಗೋಡು	-	1
ಗುಲ್ಬರ್ಗಾ ಜಿಲ್ಲೆ		
ಚಿತ್ತಾಪುರ	-	1
ಗುಲ್ಬರ್ಗಾ	-	3
ಸೇಡಂ	-	1
ಶೋರಾಪುರ್	-	1
ಅಂಳದ	-	-
ಬಳ್ಳಾರಿ ಜಿಲ್ಲೆ		
ಸಂಡೂರು	-	2
ಬಳ್ಳಾರಿ	1	2

1	2	3	1	2	3
ಹೊಸಪೇಟೆ	-	2	ಸಿಂದನೂರು	-	2
ಹರಪನಹಳ್ಳಿ	1	-	ದೇವದುರ್ಗ	-	1
ಕೂಡ್ಲಗಿ	1	-	ಕುಷ್ಟಗಿ	-	2
ರಾಯಚೂರು ಜಿಲ್ಲೆ			ರಾಯಚೂರು	4	-
ಗಂಗಾವತಿ	-	1	ಕೊಪ್ಪಳ	1	-
ಯಲ್ಬುರ್ಗಾ	-	1			

ರಾಷ್ಟ್ರೀಯ ಕ್ರೀಡೆಗಳಿಗೆ ಆದ ಖರ್ಚು ಕುರಿತು

2049 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಷ್ಟ್ರೀಯ ಕ್ರೀಡೆಗಳಿಗೆ ಆದ ಖರ್ಚು ಎಷ್ಟು (ಬೆಂಗಳೂರು ಹಾಗೂ ಮೈಸೂರು ನಗರಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಿವರ ನೀಡುವುದು) ಯಾವ ಯಾವ ಬಾಬುಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ?

2) ರಾಷ್ಟ್ರೀಯ ಕ್ರೀಡೆಗಳಿಗೆ ಪ್ರಾಯೋಜಕರಿಂದ ಪಡೆದ ಹಣ ಎಷ್ಟು? (ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಪಡೆಯಲಾಗಿದೆ ವಿವರ ನೀಡುವುದು)

3) ರಾಜ್ಯ ಸರ್ಕಾರ- ಕೇಂದ್ರ ಸರ್ಕಾರ ಹಾಗೂ ಇತರೆ ರಾಜ್ಯಗಳಿಂದ ಪಡೆದ ಹಣ ಎಷ್ಟು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

1) ಇದುವರೆಗೆ ರೂ. 115.85 ಕೋಟಿ ವೆಚ್ಚವಾಗಿದೆ. ವಿವರಗಳನ್ನು ಅನುಬಂಧ -1ರಲ್ಲಿ ಒದಗಿಸಲಾಗಿದೆ.

2) ರೂ. 6,62,84,000-00 ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

3) ಭಾರತ ಸರ್ಕಾರದಿಂದ ರೂ. 9.50 ಕೋಟಿ ರಾಜ್ಯ ಸರ್ಕಾರದಿಂದ ರೂ. 49.60 ಕೋಟಿ ಇತರ ರಾಜ್ಯ ಸರ್ಕಾರಗಳಿಂದ ಧನ ಸಹಾಯವನ್ನು ಪಡೆದಿರುವುದಿಲ್ಲ.